ಚರ್ಚೆಯನ್ನು ಕೈಬಿಡಲಾಗಿದೆ. ಆದಕಾರಣ ಎಲ್ಲಾ ಸದಸ್ಯರು ಸಹಕರಿಸಬೇಕಾಗಿ ಕೋರಿಕೆ, ಈಗ ಮೊದಲು ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಆಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಬಂದಮೇಲೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ಹಾಗೂ ವಿಧೇಯಕಗಳನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

(ಅ) ಧಾರವಾಡದ ಬುದ್ಧ ರಕ್ಷಿತ ಶಾಲೆಯ ವಿದ್ಯಾರ್ಥಿಗಳಿಗೆ ಅಧಿಕಾರಿಗಳ ನಿರ್ಲಕ್ಷ್ಯತೆ ಯಿಂದ ತೊಂದರೆ :

ಅಧ್ಯಕ್ಷರು : ಅಂಬುಗಟ್ಟಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರ ತರಿಸುವುದಕ್ಕೆ ಸರ್ಕಾರದವರು ಸಮಯವನ್ನು ಕೇಳಿದ್ದಾರೆ. ಈಗ ತಾನೆ ವರ್ತಮಾನ ಬಂದಿದೆ. ಇಲ್ಲದೇ ಹೋದರೆ ಮೊದಲೇ ನಾನು ತಮಗೆ ತಿಳಿಸುವುದಕ್ಕೆ ಏರ್ಪಾಟು ಮಾಡುತ್ತಿದ್ದೆ. ನಮ್ಮವರು ಕೂಡ ಈಗ ಕೊಡುತ್ತಿದ್ದಾನೆ, ನಾಳೆ ಬರಬೇಕು ಎಂದು ಹೇಳುತ್ತಾರೆ. ಅವರು ಎಷ್ಟು ತರಾತುರಿ ಮಾಡಿದರೂ ಕೂಡ ವರ್ತಮಾನ ಏನೆಂದರೆ ಪೂರ್ತಿ ತರಿಸುವುದಕ್ಕೆ ಆಗುತ್ತಿಲ್ಲ. ತಾವು ದಯಮಾಡಿ ಸಹಕರಿಸಿ ಉತ್ತರವನ್ನು ನಾಳೆ ತೊರಿಸಿಕೊಡುತ್ತೇವೆ.

ಶ್ರೀ ಶ್ರೀಕಾಂತ್ ಅಂಬಡ ಗಟ್ಟಿ (ಧಾರವಾಡ ಗ್ರಾಮೀಣ) : ಆಯಿತು. ಆದರೆ ತಾವು ಒಂದು ನಿಮಿಷ ಅವಕಾಶ ಕೊಟ್ಟರೆ ಸ್ವಲ್ಪ. ಮಹತ್ವದ ವಿಷಯ ಮಾತನಾಡುತ್ತೇನೆ. ಈ ರೀತಿ ಅನ್ಯಾಯ ಕಂಡು ಬಂದಾಗ ನಾನು ಮೊನ್ನೆ ಅಂದರ ಭಾನುವಾರ ಆ ವಸತಿ ಶಾಲೆಗೆ ಭೇಟಿ ಕೊಟ್ಟಿದ್ದೆ. ನಾನು ಭೇಟಿ ಕೊಟ್ಟು ಬಂದಮೇಲೆ ಅಲ್ಲಿನ ವಿದ್ಯಾರ್ಥಿಗಳು ನನಗೆ ಒಂದು ಟಿಲಿಗ್ರಾಮ್ ಕಳುಹಿಸಿದ್ದಾರೆ. ಅದು ಈ ರೀತಿ ಇದೆ. ``After your departure from Buddha Rakshita Residential School, the Head Mistress has threatened us by hiring goondas. Kindly arrange for protection". ಉತ್ತರ ಅವರು ನಾಳೆಯೋ, ನಾಡಿದ್ದೋ ಕೊಡಲಿ, ಆದರೆ ಅಲ್ಲಿರುವ ವಿದ್ಯಾರ್ಥಿಗಳಿಗೆ ರಕ್ಷಣೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ಅದು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧ ಪಟ್ಟಿರುವುದಿಲ್ಲ, ಅದು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿದೆ. ನಾನು ಶಿಕ್ಷಣ ಇಲಾಖೆಗೆ ಅದರ ಬಗ್ಗೆ ತಿಳಿಸಿ ಕ್ರಮ ಕೈಗೊಳ್ಳಲು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮಾನ್ಯ ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ ಆ ವಿದ್ಯಾರ್ಥಿಗಳಿಗೆ ರಕ್ಷಣೆಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.